ದಿನಾಂಕಃ 01.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟಿ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಎಲ್ ಎಸ್ ವಕೀಲರಿಂದಃ**

ಪ್ರತಿವಾದಿ ನಮ್ಮ ಮನೆಯ ಪಕ್ಕದಲ್ಲಿ ವಾಸವಾಗಿರುವುದರಿಂದ ಪರಿಚಯ ಇರುತ್ತಾರೆ. ಪ್ರತಿವಾದಿಯೇ ನನ್ನ ಬಳಿ ಬಂದು ಜಮೀನು ಮಾರಾಟ ಮಾಡುವುದಾಗಿ ತಿಳಿಸಿದರು. ಪ್ರತಿವಾದಿಯ ಜಮೀನನ್ನು ಖರೀದಿಸುವಾಗ ಜಮೀನಿನ ದಾಖಲೆಗಳನ್ನು

ಪರಿಶೀಲಿಸಿರುತ್ತೇನೆ. ದಾಖಲಾತಿಗಳು ಸರಿಯಾಗಿ ಇದ್ದುದರಿಂದ ಪ್ರತಿವಾದಿ ಜಮೀನನ್ನು ಖರೀದಿಸಲು ನಾನು ತಯಾರಿದ್ದೆ ಎಂದರೆ ಸರಿ. ಪ್ರತಿವಾದಿಯ ಜಮೀನನ್ನು ಒಟ್ಟು ರೂ.20,00,000/- ಗಳಿಗೆ ಖರೀದಿಸಲು ಮಾತುಕತೆ ಆಗಿತ್ತು. ಆ ಮಾತುಕತೆ ಆಗುವ ಸಮಯದಲ್ಲಿ ನಮ್ಮ ಊರಿನ ವಾಸು ಎನ್ನುವವರು ಇದ್ದರು. 2021 ರ ಸೆಪ್ಟೆಂಬರ್ ತಿಂಗಳಿನಲ್ಲಿ ಜಮೀನು ಖರೀದಿಸುವ ಮಾತುಕತೆ ಆಗಿರುತ್ತದೆ. ಜಮೀನು ಖರೀದಿಸುವ ಮಾತುಕತೆ ಆಗುವ ಸಮಯದಲ್ಲಿ ನನ್ನ ಬಳಿ ರೂ.20,00,000/- ಹಣ ಇರಲಿಲ್ಲ ಎಂದರೆ ಸರಿಯಲ್ಲ. ಕರಾರು ಪತ್ರದ ವಿಷಯಗಳನ್ನು ನಾನು ಮತ್ತು ಪ್ರತಿವಾದಿ ಹೇಳಿ ಬರೆಸಿರುತ್ತೇವೆ. ಕರಾರು ಪತ್ರದಲ್ಲಿ ಒಂದು ವರ್ಷದ ಒಳಗೆ ಖರೀದಿ ಪತ್ರ ಮಾಡಿಕೊಳ್ಳದೇ ಇದ್ದ ಪಕ್ಷದಲ್ಲಿ ಮುಂಗಡ ಹಣವನ್ನು ನನಗೆ ಮರುಪಾವತಿ ಮಾಡಿ ಕ್ರಯದ ಕರಾರು ಪತ್ರವನ್ನು ರದ್ದುಪಡಿಸಬಹುದು ಎಂದು ನಮೂದಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರತಿವಾದಿಯಿಂದ ಖರೀದಿ ಪತ್ರ ಮಾಡಿಸಿಕೊಳ್ಳಲು ನಾನು ತಯಾರಿದ್ದರೂ ಸಹ ಪ್ರತಿವಾದಿ ಖರೀದಿ ಪತ್ರ ಮಾಡಿಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗೆ ವಕೀಲರ ಮೂಲಕ ಖರೀದಿ ಪತ್ರ ಬರೆದುಕೊಡುವಂತೆ ನೋಟಿಸ್ ನೀಡಿಲ್ಲ ಎಂದರೆ ಸರಿ.

ದಿಃ 05.09.2023 ರವರೆಗೂ ನಾನು ಪ್ರತಿವಾದಿಯಿಂದ ಖರೀದಿ ಪತ್ರ ಬರೆಸಿಕೊಳ್ಳಲು ಸಿದ್ದನಿರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನನಗೆ ಹಲವಾರು ಬಾರಿ ಉಳಿಕೆ ಹಣ ನೀಡಿ ಖರೀದಿ ಪತ್ರ ಮಾಡಿಸಿಕೊಳ್ಳುವಂತೆ ಕೇಳಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ರೂ.15,00,000/- ಕ್ಕೆ ಮಾತ್ರ ಖರೀದಿ ಪತ್ರ ಮಾಡಿಕೊಡುವಂತೆ ಹೇಳಿದ್ದರಿಂದ ಪ್ರತಿವಾದಿಯೇ ನನಗೆ ದಿಃ 05.09.2023 ರಂದು ವಕೀಲರ ಮೂಲಕ ನೋಟಿಸ್ ನೀಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 05.09.2023 ರಂದು ಪ್ರತಿವಾದಿ ನೀಡಿದ ನೋಟಿಸ್ ನನಗೆ ಜಾರಿಯಾಗಿದೆ ಎಂದರೆ ಸರಿ. ಪ್ರತಿವಾದಿ ನನಗೆ ನೋಟಿಸ್ ನೀಡುವ ಪೂರ್ವದಲ್ಲಿ ದಾವೆ ಸಲ್ಲಿಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು

ಊರಿನಲ್ಲಿ ಪಂಚಾಯಿತಿ ಮಾಡಿದಾಗ ಪ್ರತಿವಾದಿ ದಾಖಲಾತಿಗಳನ್ನು ಹಾಜರುಪಡಿಸಿ ಖರೀದಿ ಪತ್ರ ಮಾಡಿಕೊಡುತ್ತೇನೆ ಎಂದು ಹೇಳಿದ್ದರಿಂದ ದಾವೆ ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದಿಗೆ ಹೆಚ್ಚುವರಿಯಾಗಿ ರೂ.3,00,000/- ಹಣ ಪಾವತಿ ಮಾಡಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿ ಸಲ್ಲಿಸಿಲ್ಲ ಎಂದರೆ ಸರಿ. ಪ್ರತಿವಾದಿ ನನಗೆ ನೀಡಿದ ನೋಟಿಸ್ ಗೆ ಮರು ಉತ್ತರ ನೀಡಿರುತ್ತೇನೆ ಎಂದರೆ ಸರಿಯಲ್ಲ. ಜೆ ಪಿ Law Associates ಎನ್ನುವವರ ಪರಿಚಯ ನನಗೆ ಇಲ್ಲ. ದಿಃ 06.10.2023 ರಂದು ಜೆ ಪಿ Law Associates ಕಡೆಯಿಂದ ಪ್ರತಿವಾದಿಗೆ ಮರುಉತ್ತರ ನೀಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಮರುಉತ್ತರ ನೀಡಿದ್ದರೂ ಸಹ ನೀಡಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕರಾರು ಪತ್ರದಲ್ಲಿ ನಮೂದಿಸಿದ ಕಾಲಮಿತಿಯೊಳಗೆ ನಾನು ಖರೀದಿ ಪತ್ರ ಮಾಡಿಸಿಕೊಳ್ಳದೇ ಇದ್ದುದರಿಂದ ಪ್ರತಿವಾದಿ ಕರಾರು ಪತ್ರವನ್ನು ರದ್ದುಗೊಳಿಸಿರುವುದಡರಿಂದ ನಾನು ಸಲ್ಲಿಸಿದ ದಾವೆ ಊರ್ಜಿತ ಅಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಪರಿಹಾರ ಪಡೆದುಕೊಳ್ಳಲು ಅರ್ಹನಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಹೆಚ್ಚುವರಿಯಾಗಿ ರೂ.3,00,000/- ಹಣ ನೀಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಾಮರಾಜನಗರ.